## ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧಿನಿಯಮ, 1984

**(ಕರ್ನಾಟಕ ರಾಜ್ಯಪತ್ರ, ಗುರುವಾರ ಜೂನ್ 22, 2006, ಭಾಗ – IVಎ ಯಲ್ಲಿ 1052 ರಿಂದ 1059ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.**

### ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ವ್ಯಾಖ್ಯೆ.
3. ಕ್ಯಾಪಿಟೇಷನ್ ಶುಲ್ಕ ವಸೂಲಿಯ ನಿಷೇಧ
4. ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶದ ನಿಯಂತ್ರಣ, ಇತ್ಯಾದಿ
5. ಶುಲ್ಕಗಳ ನಿಯಂತ್ರಣ, ಇತ್ಯಾದಿ.
6. ವೆಚ್ಚದ ನಿಯಂತ್ರಣ ಮತ್ತು ಲೆಕ್ಕ ಪತ್ರಗಳ ನಿರ್ವಹಣೆ, ಇತ್ಯಾದಿ
7. ದಂಡನೆಗಳು
8. ಕಂಪನಿಗಳಿಂದ ಅಪರಾಧಗಳು
9. ಪ್ರವೇಶಿಸುವ ಮತ್ತು ಪರಿಶೀಲಿಸುವ ಅಧಿಕಾರ
10. ಅಲ್ಪ ಸಂಖ್ಯಾತ ಸಂಸ್ಥೆಗಳಿಗೆ ಅಧಿನಿಯಮದ ಅನ್ವಯ
11. ಅಪರಾಧಗಳ ಸಂಜ್ಞೇಯತೆ
12. ಇತರ ಕಾನೂನುಗಳನ್ನು ಅಧಿಕ್ರಮಿಸುವ ಅಧಿನಿಯಮ
13. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
14. ನಿಯಮ ರಚನಾಧಿಕಾರ
15. ಸಿಂಧುಗೊಳಿಸುವಿಕೆ
16. ರದ್ದಿಯಾತಿ ಮತ್ತು ಉಳಿಸುವಿಕೆಗಳು ಇತ್ಯಾದಿ

* * *

### ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

**1984ರ ಅಧಿನಿಯಮ 37.–** ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಕ್ಯಾಪಿಟೇಷನ್ ಶುಲ್ಕವನ್ನು ವಸೂಲು ಮಾಡುವ ಪದ್ಧತಿ ರಾಜ್ಯದಲ್ಲಿ ಬಹಳ ವ್ಯಾಪಕವಾಗಿದೆ.

ಈ ಅನಪೇಕ್ಷಿತ ಪದ್ಧತಿಯು ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಣದ ವಾಣಿಜ್ಯೀಕರಣಕ್ಕೆ ಅವಕಾಶ ಕಲ್ಪಿಸುವುದರ ಜೊತೆಗೆ ಶಿಕ್ಷಣದ ಗುಣಮಟ್ಟವನ್ನು ಕಾಪಾಡಲು ಅನುಕೂಲಕರವಾಗಿಲ್ಲ.

ಸಾರ್ವಜನಿಕ ಹಿತದೃಷ್ಟಿಯಿಂದ ಈ ಅನಿಷ್ಟ ಪದ್ಧತಿಯನ್ನು ಪರಿಣಾಮಕಾರಿಯಾಗಿ ತಡೆಗಟ್ಟುವುದು ಮತ್ತು ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕಾಗಿ ಕ್ಯಾಪಿಟೇಷನ್ ಶುಲ್ಕ ವಸೂಲಿ ಮಾಡುವುದನ್ನು ನಿಷೇಧಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು ವಿನಿಯಮಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಈ ವಿಷಯವು ಬಹಳ ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ವಿಧಾನ ಮಂಡಲದ ಯಾವುದೇ ಸದನವು ಅಧಿವೇಶನದಲ್ಲಿಲ್ಲದಿದ್ದುದರಿಂದ ಒಂದು ಅಧ್ಯಾದೇಶವನ್ನು ಹೊರಡಿಸಲಾಯಿತು.

ಈ ವಿಧೇಯಕವನ್ನು ಸದರಿ ಅಧ್ಯಾದೇಶಕ್ಕೆ ಬದಲಾಗಿ ಮಂಡಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ದಿನಾಂಕ 25.1.1984ರಲ್ಲಿ ಸಂಖ್ಯೆ 70 ಎಂದು ಪುಟ 10 ರಲ್ಲಿ ಪ್ರಕಟಿಸಲಾಗಿದೆ.)

### II

**1985ರ ತಿದ್ದುಪಡಿ ಮಾಡುವ ಅಧಿನಿಯಮ 17.–** ವಿಧಾನ ಮಂಡಲದ ಉಭಯ ಸದನಗಳಿಂದ ಅನುಮೋದನೆ ಪಡೆದ 1984ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) ವಿಧೇಯಕವನ್ನು ಭಾರತ ಸಂವಿಧಾನದ 200ನೇ ಅನುಚ್ಛೇದದ ಮೇರೆಗೆ ರಾಷ್ಟ್ರಪತಿಯವರ ಪರಿಗಣನೆಗಾಗಿ ಕರ್ನಾಟಕ ರಾಜ್ಯಪಾಲರು ಕಾದಿರಿಸಿದ್ದರು. ವಿಧೇಯಕವು ರಾಷ್ಟ್ರಪತಿಯವರ ಅನುಮತಿಯ ನಿರೀಕ್ಷೆಯಲ್ಲಿರುವಾಗ ಪ್ರತಿಸ್ಥಾಪಿಸಲು ಉದ್ದೇಶಿಸಿದ 1983ರ ಅಧ್ಯಾದೇಶ 14ರ ಅವಧಿ ಮುಕ್ತಾಯವಾಯಿತು ಹಾಗೂ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧ್ಯಾದೇಶ, 1984 (1984ರ ಕರ್ನಾಟಕ ಅಧ್ಯಾದೇಶ 8)ನ್ನು ವಿಧೇಯಕದಲ್ಲಿ ಗಣನಾರ್ಹವಾಗಿ ಇರುವಂಥಹವೇ ಉಪಬಂಧಗಳೊಂದಿಗೆ 11ನೇ ಜುಲೈ 1983ರಿಂದ ಜಾರಿಗೆ ಬರುವಂತೆ ಹೊರಡಿಸುವುದು ಅವಶ್ಯವಾಯಿತು. ಇದನ್ನು 1983ರ ಕರ್ನಾಟಕ ಅಧ್ಯಾದೇಶದ ಮೇರೆಗೆ ಹೊರಡಿಸಲಾದ ಅಥವಾ ಸಿಂಧುಗೊಳಿಸಲಾದ ನಿಯಮಗಳು, ಆದೇಶಗಳು ಮತ್ತು ಅಧಿಸೂಚನೆಗಳಿಗೆ ಮತ್ತು 1984 – 85ನೇ ಸಾಲಿನ ಶೈಕ್ಷಣಿಕ ವರ್ಷಕ್ಕಾಗಿ ಹೊರಡಿಸಲಾದ ಅಥವಾ ಹೊರಡಿಸಬೇಕಾದ ವಿಷಯದ ಮೇಲೆ ನಿಯಮಗಳು, ಆದೇಶಗಳು ಮತ್ತು ಅಧಿಸೂಚನೆಗಳಿಗೆ ಕಾನೂನಿನ ಸಿಂಧುತ್ವವನ್ನು ಒದಗಿಸಲು ಅದನ್ನು 9ನೇ ಜುಲೈ 1984ರಂದು ಜಾರಿಗೊಳಿಸಲಾಯಿತು.

ತರುವಾಯ ವಿಧೇಯಕಕ್ಕೆ ರಾಷ್ಟ್ರಪತಿಯವರ ಅನುಮತಿ ದೊರೆಯಿತು ಮತ್ತು 9ನೇ ಆಗಸ್ಟ್ 1984 ರಂದು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧಿನಿಯಮ, 1984 (1984ರ ಕರ್ನಾಟಕ ಅಧಿನಿಯಮ 37) ಎಂಬುದಾಗಿ ಅದನ್ನು ಪ್ರಕಟಿಸಲಾಯಿತು. ಆದ್ದರಿಂದ, ಅದರ ಮೂಲಕ ತೆಗೆದುಕೊಂಡ ಕ್ರಮವನ್ನು ಅಥವಾ ಸಿಂಧುತ್ವವನ್ನು ಉಳಿಸಿ 1984ರ ಕರ್ನಾಟಕ ಅಧ್ಯಾದೇಶ 8ನ್ನು ನಿರಸನಗೊಳಿಸಬೇಕಾಯಿತು.

ರಾಷ್ಟ್ರಪತಿಯವರ ಅನುಮತಿಯನ್ನು ತಿಳಿಸುವಾಗ ಭಾರತ ಸರ್ಕಾರವು, 1983ರ ಕರ್ನಾಟಕ ಅಧ್ಯಾದೇಶ 14 ರದ್ದಾದ ನಂತರ, ಆದರೆ, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿನಿಯಮವು ಪ್ರಕಟವಾದ ದಿನಾಂಕಕ್ಕೆ ಮುಂಚೆ, ಅಧಿನಿಯಮದ ಯಾವುವೇ ಉಪಬಂಧಗಳ ಉಲ್ಲಂಘನೆಯು, ಅಪರಾಧಗಳನ್ನು ಪೂರ್ವಾನ್ವಯವಾಗಿ ಸೃಜಿಸಲು ಸಾಧ್ಯವಾಗದಿರುವುದರಿಂದ, ಅಧಿನಿಯಮದ 7 ಅಥವಾ 8ನೇ ಪ್ರಕರಣದ ಮೇರೆಗೆ ದಂಡನೀಯವಾಗತಕ್ಕದ್ದಲ್ಲ ಎನಿಸುವಷ್ಟರ ಮಟ್ಟಿಗೆ ಅಧಿನಿಯಮವನ್ನು ತಿದ್ದುಪಡಿ ಮಾಡಬಹುದೆಂದೂ ಸಹ ನಿರ್ದೇಶನಗಳನ್ನು ನೀಡಿತ್ತು.

1984ರ ಕರ್ನಾಟಕ ಅಧ್ಯಾದೇಶ 8ನ್ನು ನಿರಸನಗೊಳಿಸುವ ಮತ್ತು ಅಧಿನಿಯಮವನ್ನು ಭಾರತ ಸರ್ಕಾರದ ನಿರ್ದೇಶನಗಳಿಗನುಸಾರವಾಗಿ ತಿದ್ದುಪಡಿ ಮಾಡುವ ಮತ್ತು ಕೈಗೊಂಡ ಕಾರ್ಯದ ಸಿಂಧುತ್ವವನ್ನು ಅಥವಾ 1984ರ ಕರ್ನಾಟಕ ಅಧ್ಯಾದೇಶ 8ರ ಮೂಲಕ ಸಿಂಧುಗೊಂಡಿರುವುದೂ ಸೇರಿದಂತೆ, ಅಧಿನಿಯಮಕ್ಕೆ ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಮಾಡುವ ಸಲುವಾಗಿ, 1984ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) (ತಿದ್ದುಪಡಿ) ಅಧ್ಯಾದೇಶವನ್ನು 9ನೇ ಆಗಸ್ಟ್ 1984ರಂದು, 1984ರ ಕರ್ನಾಟಕ ಅಧ್ಯಾದೇಶ 10 ಎಂಬುದಾಗಿ ಘೋಷಿಸಲಾಯಿತು. ಸದರಿ ಅಧ್ಯಾದೇಶವು 1985ರ ಜನವರಿ 10ನೇ ದಿನಾಂಕದಂದು ಕೊನೆಗೊಂಡಿದ್ದರಿಂದ, ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) (ತಿದ್ದುಪಡಿ) ಅಧ್ಯಾದೇಶ, 1985 (1985ರ ಕರ್ನಾಟಕ ಅಧ್ಯಾದೇಶ 2) ನ್ನು ಘೋಷಿಸಲಾಯಿತು. ಈ ವಿಧೇಯಕವನ್ನು ಸದರಿ ಅಧ್ಯಾದೇಶಕ್ಕೆ ಬದಲಾಗಿ ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯ ಪತ್ರ (ವಿಶೇಷ ಸಂಚಿಕೆ) ಭಾಗ IV 2ಎನಲ್ಲಿ ದಿನಾಂಕ 25.3.1985ರಲ್ಲಿ ಸಂಖ್ಯೆ 163 ಎಂದು ಪುಟ 5 – 6 ರಲ್ಲಿ ಪ್ರಕಟಿಸಲಾಗಿದೆ.)

## III

**2003ರ ತಿದ್ದುಪಡಿ ಮಾಡುವ ಅಧಿನಿಯಮ 15.–** ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕಾಗಿ ಕ್ಯಾಪಿಟೇಷನ್ ಶುಲ್ಕವನ್ನು ವಸೂಲಿ ಮಾಡುವ ಅನಿಷ್ಟ ಪದ್ಧತಿಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಪರಿಣಾಮಕಾರಿಯಾಗಿ ತಡೆಗಟ್ಟಲು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳನ್ನು ವಿನಿಯಮಿಸಲು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧಿನಿಯಮ, 1984 (1984ರ ಕರ್ನಾಟಕ ಅಧಿನಿಯಮ 37) 11ನೇ ಜುಲೈ 1983 ರಿಂದ ಜಾರಿಗೆ ಬಂದಿದೆ. ಸದರಿ ಅಧಿನಿಯಮದ 2ನೇ ಪ್ರಕರಣದ (ಸಿ) ಖಂಡದಲ್ಲಿ, ಶಿಕ್ಷಣ ಸಂಸ್ಥೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 28)ರ ಅಡಿಯಲ್ಲಿ ಸ್ಥಾಪಿಸಲಾದ ವಿಶ್ವ ವಿದ್ಯಾಲಯದ ಮೂಲಕ ಪದವಿಯನ್ನು ಪ್ರದಾನ ಮಾಡುವುದಕ್ಕೆ ಅವಕಾಶ ಕಲ್ಪಿಸುವ ಒಂದು ಸಂಸ್ಥೆ ಎಂದು ಪರಿಭಾಷಿಸಲಾಗಿದೆ. ಸದರಿ ಅಧಿನಿಯಮದ ರಚನೆಯ ತರುವಾಯ, ಕನ್ನಡ ವಿಶ್ವ ವಿದ್ಯಾಲಯ ಅಧಿನಿಯಮ, 1991, ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯ ಅಧಿನಿಯಮ, 1992, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ ಅಧಿನಿಯಮ, 1994 ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯ ಅಧಿನಿಯಮ, 1994 ಇವು ಅಧಿನಿಯಮಿತವಾಗಿವೆ ಮತ್ತು 1963ರ ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ ಅಧಿನಿಯಮವು ಶಿಕ್ಷಣ ಸಂಸ್ಥೆಯ ಪರಿಭಾಷೆಯ ವ್ಯಾಪ್ತಿಯೊಳಗೆ ಸೇರಿರಲಿಲ್ಲ. ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸ್ಥಾಪಿಸಲಾದ ವಿಶ್ವ ವಿದ್ಯಾಲಯವು ಪ್ರದಾನ ಮಾಡುವ ಪದವಿಗೆ ಅವಕಾಶ ಕಲ್ಪಿಸುವ ಎಲ್ಲ ಶಿಕ್ಷಣ ಸಂಸ್ಥೆಗಳನ್ನು ಈ ವ್ಯಾಪ್ತಿಯೊಳಗೆ ತರುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ವಿ.ಸ. ವಿಧೇಯಕ ಸಂಖ್ಯೆ 2002 ರ 18)

## 1984ರ ಕರ್ನಾಟಕ ಅಧಿನಿಯಮ ಸಂಖ್ಯೆ 37

*(1984ರ ಆಗಸ್ಟ್ ಒಂಬತ್ತನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

# ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧಿನಿಯಮ, 1984

*(1984ರ ಜುಲೈ ಇಪ್ಪತ್ತನೇ ದಿನದಂದು ರಾಷ್ಟ್ರಪತಿಯವರ ಅನುಮತಿ ಪಡೆದಿದೆ)*

( ಅಧಿನಿಯಮ ಸಂಖ್ಯೆ 1985ರ 17 ಮತ್ತು 2003ರ 15 – ಇವುಗಳ ಮೂಲಕ ತಿದ್ದುಪಡಿಯಾದಂತೆ)

**ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ನೀಡುವುದಕ್ಕಾಗಿ ಕ್ಯಾಪಿಟೇಷನ್ ಶುಲ್ಕ ವಸೂಲಿ ಮಾಡುವುದನ್ನು ನಿಷೇಧಿಸುವ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಒಂದು ಅಧಿನಿಯಮ.**

ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದಕ್ಕಾಗಿ ಕ್ಯಾಪಿಟೇಷನ್ ಶುಲ್ಕ ವಸೂಲಿ ಮಾಡುವ ಪದ್ಧತಿಯು ರಾಜ್ಯದಲ್ಲಿ ವ್ಯಾಪಕವಾಗಿರುವುದರಿಂದ;

ಮತ್ತು ಈ ಅನಪೇಕ್ಷಿತ ಪದ್ಧತಿಯು ಶಿಕ್ಷಣವನ್ನು ಹೆಚ್ಚಿನ ಪ್ರಮಾಣದಲ್ಲಿ ವಾಣಿಜ್ಯೀಕರಣಗೊಳಿಸುವುದರ ಜೊತೆಗೆ ಶಿಕ್ಷಣದ ಗುಣಮಟ್ಟವನ್ನು ಕಾಪಾಡಲು ಅನುಕೂಲಕರವಾಗಿಲ್ಲದಿರುವುದರಿಂದ ;

ಮತ್ತು ಕ್ಯಾಪಿಟೇಷನ್ ಶುಲ್ಕ ವಸೂಲಿಯ ನಿಷೇಧ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಉಪಬಂಧ ಕಲ್ಪಿಸುವ ಮೂಲಕ ಸಾರ್ವಜನಿಕ ಹಿತದೃಷ್ಟಿಯಿಂದ ಈ ಅನಿಷ್ಟ ಪದ್ಧತಿಯನ್ನು ಪರಿಣಾಮಕಾರಿಯಾಗಿ ತಡೆಗಟ್ಟುವುದು ಅಗತ್ಯವೆಂದು ಪರಿಗಣಿಸಿರುವುದರಿಂದ;

ಇದು ಭಾರತ ಗಣರಾಜ್ಯದ ಮೂವತ್ತನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧಿನಿಯಮ, 1984 ಎಂದು ಕರೆಯತಕ್ಕದ್ದು.

[1][(2) ಈ ಪ್ರಕರಣ, 15ನೇ ಪ್ರಕರಣದ (ಸಿ) ಖಂಡ ಮತ್ತು 16ನೇ ಪ್ರಕರಣದ (2) ಮತ್ತು (4)ನೇ ಉಪ ಪ್ರಕರಣಗಳು ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಉಳಿದ ಉಪಬಂಧಗಳು, 1983ರ ಜುಲೈ 11ನೇ ದಿನಾಂಕದಿಂದ ಜಾರಿಯಲ್ಲಿ ಬಂದಿರುವುದಾಗಿ ಭಾವಿಸತಕ್ಕದ್ದು ][1]

1. 1985ರ ಅಧಿನಿಯಮ 17ರ ಮೂಲಕ 9.8.1984ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**2. ವ್ಯಾಖ್ಯೆ.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಹಿಂದುಳಿದ ವರ್ಗಗಳು" ಎಂದರೆ, ಭಾರತ ಸಂವಿಧಾನದ 15ನೇ ಅನುಚ್ಛೇದದ 4ನೇ ಖಂಡದ ಉದ್ದೇಶಗಳಿಗಾಗಿ ಸರ್ಕಾರದಿಂದ ಮಾನ್ಯತೆ ಪಡೆದಿರುವ ಮತ್ತು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ನಾಗರಿಕರ ಯಾವುವೇ ವರ್ಗಗಳು;

(ಬಿ) "ಕ್ಯಾಪಿಟೇಷನ್ ಶುಲ್ಕ" ಎಂದರೆ, 5ನೇ ಪ್ರಕರಣದ ಮೇರೆಗೆ ನಿಗದಿಪಡಿಸಲಾದ ಶುಲ್ಕಕ್ಕಿಂತ ಅಧಿಕವಾಗಿ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂದಾಯ ಮಾಡಿದ ಅಥವಾ ವಸೂಲಿ ಮಾಡಿದ, ಯಾವುದೇ ಹೆಸರಿನಿಂದ ಕರೆಯಲಾಗುವ ಯಾವುದೇ ಮೊಬಲಗು, ಆದರೆ ಇದರಲ್ಲಿ 3ನೇ ಪ್ರಕರಣದ ಪರಂತುಕದ ಮೇರೆಗೆ ನಿರ್ದಿಷ್ಟಪಡಿಸಲಾದ ಠೇವಣಿಯು ಒಳಗೊಳ್ಳುವುದಿಲ್ಲ ;

(ಸಿ) "ಶಿಕ್ಷಣ ಸಂಸ್ಥೆ" ಎಂದರೆ, [1][ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸ್ಥಾಪಿತವಾದ ವಿಶ್ವ ವಿದ್ಯಾನಿಲಯದಿಂದ][1] ಪದವಿ ನೀಡಿಕೆಗೆ ಅವಕಾಶ ಕಲ್ಪಿಸುವ, ವೈದ್ಯಕೀಯ ಅಥವಾ ಇಂಜಿನಿಯರಿಂಗ್ ಶಿಕ್ಷಣವನ್ನು ನೀಡುವ ಕಾರ್ಯವನ್ನು ನಿರ್ವಹಿಸುವ ಸರ್ಕಾರ, ಖಾಸಗಿ ನಿಕಾಯ, ಸ್ಥಳೀಯ ಪ್ರಾಧಿಕಾರ, ನ್ಯಾಸ, ವಿಶ್ವ ವಿದ್ಯಾನಿಲಯ ಅಥವಾ ಯಾರೇ ಇತರ ವ್ಯಕ್ತಿಯು ನಿರ್ವಹಿಸುವ, ಯಾವುದೇ ಹೆಸರಿನಿಂದ ಕರೆಯಲಾಗುವ ಯಾವುದೇ ಸಂಸ್ಥೆ ಮತ್ತು ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದಾದಂಥ ಯಾವುದೇ ಇತರ ಶಿಕ್ಷಣ ಸಂಸ್ಥೆ ಅಥವಾ ಅಂಥ ಸಂಸ್ಥೆಯ ವರ್ಗ ಅಥವಾ ವರ್ಗಗಳು ;

1. 2003ರ ಅಧಿನಿಯಮ 15ರ ಮೂಲಕ 5.4.2003ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ ;

(ಇ) "ಸರ್ಕಾರಿ ಸೀಟುಗಳು" ಎಂದರೆ, ಕ್ಯಾಪಿಟೇಷನ್ ಶುಲ್ಕ ಅಥವಾ ನಗದು ಠೇವಣಿಯ ಸಂದಾಯದ ಅಗತ್ಯವಿಲ್ಲದೆ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂತೆ, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು, ಹಿಂದುಳಿದ ವರ್ಗಗಳು ಮತ್ತು ಅಂಥ ಇತರ ಪ್ರವರ್ಗಗಳಿಗೆ ಯೋಗ್ಯತೆ ಮತ್ತು ಮೀಸಲಾತಿಯ ಆಧಾರದ ಮೇಲೆ, ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ

ರೀತಿಯಲ್ಲಿ ಭರ್ತಿ ಮಾಡಲು ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂತೆ, ರಾಜ್ಯದಲ್ಲಿನ ಅಂಥ ಶಿಕ್ಷಣ ಸಂಸ್ಥೆಗಳಲ್ಲಿ ಅಥವಾ ಅಂಥ ಸಂಸ್ಥೆಗಳ ವರ್ಗ ಅಥವಾ ವರ್ಗಗಳಲ್ಲಿನ ಅಷ್ಟು ಸಂಖ್ಯೆಯ ಸೀಟುಗಳು;

(ಎಫ್) "ಆಡಳಿತ" ಎಂದರೆ, ಒಂದು ಶಿಕ್ಷಣ ಸಂಸ್ಥೆಯ ವ್ಯವಹಾರಗಳನ್ನು ವಹಿಸಿಕೊಡಲಾಗಿರುವ, ಯಾವುದೇ ಹೆಸರಿನಿಂದ ಕರೆಯಲಾಗುವ, ಆ ಸದರಿ ಸಂಸ್ಥೆಯ ಆಡಳಿತ ಸಮಿತಿ ಅಥವಾ ಆಡಳಿತ ಮಂಡಳಿ; ಮತ್ತು ಅದು, ಅಂಥ ವ್ಯವಹಾರಗಳನ್ನು ಯಾರೇ ವ್ಯಕ್ತಿಗೆ ವಹಿಸಿಕೊಡಲಾಗಿರುವಲ್ಲಿ, ಅವನನ್ನು ಕಾರ್ಯದರ್ಶಿ, ಭಾತ್ಮೀದಾರ ಅಥವಾ ಯಾವುದೇ ಇತರ ಹೆಸರಿನಿಂದ ಕರೆದಿರಲಿ ಅಂಥ ವ್ಯಕ್ತಿಯನ್ನು ಸಹ ಒಳಗೊಳ್ಳುತ್ತದೆ;

(ಜಿ) "ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳು" ಎಂದರೆ, ಭಾರತ ಸಂವಿಧಾನದ ಅನುಚ್ಛೇದ 30ರ ಅಡಿಯಲ್ಲಿ ಉಪಬಂಧಿಸಲಾದಂತೆ ಅಲ್ಪ ಸಂಖ್ಯಾತರಿಂದ ಸ್ಥಾಪಿತವಾದ ಮತ್ತು ಆಡಳಿತ ನಡೆಸಲಾಗುತ್ತಿರುವ ಶಿಕ್ಷಣ ಸಂಸ್ಥೆಗಳು; ಮತ್ತು

(ಹೆಚ್) "ಅನುಸೂಚಿತ ಜಾತಿಗಳು" ಮತ್ತು "ಅನುಸೂಚಿತ ಬುಡಕಟ್ಟುಗಳು" ಭಾರತ ಸಂವಿಧಾನದ 366ನೇ ಅನುಚ್ಛೇದದ (24) ನೇ ಮತ್ತು (25)ನೇ ಖಂಡದಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಲಾದಂಥ ಅರ್ಥವನ್ನೇ ಹೊಂದಿರತಕ್ಕದ್ದು.

**3. ಕ್ಯಾಪಿಟೇಷನ್ ಶುಲ್ಕ ವಸೂಲಿಯ ನಿಷೇಧ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ಶಿಕ್ಷಣ ಸಂಸ್ಥೆಯು ಅಥವಾ ಅದರ ಪರವಾಗಿ ಅಥವಾ ಅಂಥ ಸಂಸ್ಥೆಯ ಆಡಳಿತ ಪ್ರಭಾರದಲ್ಲಿರುವ ಅಥವಾ ಜವಾಬ್ದಾರಿ ಹೊಂದಿರುವ ಯಾರೇ ವ್ಯಕ್ತಿಯು ಯಾವುದೇ ಕ್ಯಾಪಿಟೇಷನ್ ಶುಲ್ಕವನ್ನು ವಸೂಲು ಮಾಡತಕ್ಕದ್ದಲ್ಲ:

ಆದರೆ, ವಿಧಿಸಬಹುದಾದಂಥ ನಿಯಮಗಳಿಗೆ ಅಥವಾ ಕಾಲಕಾಲಕ್ಕೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಸರ್ಕಾರವು, ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮವು ಅಸ್ತಿತ್ವಕ್ಕೆ ಬಂದ ದಿನಾಂಕಕ್ಕೆ ಮುಂಚೆ ಸ್ಥಾಪಿತವಾದ ಮತ್ತು ಕ್ಯಾಪಿಟೇಷನ್ ಶುಲ್ಕವೆಂದು ವಸೂಲು ಮಾಡಿದ ಮೊಬಲಗಿನಿಂದ ನಿರ್ವಹಿಸಲಾದ ಅಥವಾ ಏಕಮಾತ್ರವಾಗಿ ಅಥವಾ ಗಣನೀಯವಾಗಿ ಅಭಿವೃದ್ಧಿಹೊಂದಿದ ಯಾವುದೇ ಶಿಕ್ಷಣ ಸಂಸ್ಥೆಗೆ ಅಥವಾ ಅಂಥ ಸಂಸ್ಥೆಗಳ ಯಾವುದೇ ವರ್ಗ ಅಥವಾ ವರ್ಗಗಳಿಗೆ ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ , ಅಷ್ಟರ ಮಟ್ಟಿಗೆ ಮತ್ತು ಅಂಥ ಅವಧಿಯವರೆಗೆ ಅಂಥ ಕ್ಯಾಪಿಟೇಷನ್ ಶುಲ್ಕವನ್ನು ಅಥವಾ ನಗದು ಠೇವಣಿಗಳನ್ನು ಸ್ವೀಕರಿಸುವುದನ್ನು ಮುಂದುವರಿಸಲು ಅನುಮತಿ ನೀಡಬಹುದು. ಆದಾಗ್ಯೂ, ಅಂಥ ಅವಧಿಯನ್ನು, ಯಾವುದೇ ಸಂದರ್ಭದಲ್ಲಿ ಅಂಥ ದಿನಾಂಕದಿಂದ ಐದು ವರ್ಷಗಳನ್ನು ಮೀರಿ ವಿಸ್ತರಿಸತಕ್ಕದ್ದಲ್ಲ.

**4. ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶದ ನಿಯಂತ್ರಣ, ಇತ್ಯಾದಿ.–** ಸರ್ಕಾರವು ಈ ಸಂಬಂಧದಲ್ಲಿ ಮಾಡಬಹುದಾದಂಥ ನಿಯಮಗಳು ಅಥವಾ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೆ ಒಳಪಟ್ಟು,–

(1) (ಎ) ಒಂದು ಶಿಕ್ಷಣ ಸಂಸ್ಥೆಯಲ್ಲಿ ಯಾವುದೇ ಅಧ್ಯಯನದ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆಯಲು ಕನಿಷ್ಠ ವಿದ್ಯಾರ್ಹತೆಯು,–

(i) ವಿಶ್ವ ವಿದ್ಯಾನಿಲಯವು ನಿರ್ವಹಿಸುವ ಅಥವಾ ಅದಕ್ಕೆ ಸಂಯೋಜನೆಗೊಂಡ ಒಂದು ಶಿಕ್ಷಣ ಸಂಸ್ಥೆಯಲ್ಲಿ ಯಾವುದೇ ಅಧ್ಯಯನ ಕ್ರಮದ ಸಂದರ್ಭದಲ್ಲಿ, ಅಂಥ ವಿಶ್ವ ವಿದ್ಯಾನಿಲಯವು ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು:

ಆದರೆ, ಸರ್ಕಾರವು ಶಿಕ್ಷಣದ ಶ್ರೇಷ್ಠತೆಯ ದೃಷ್ಟಿಯಿಂದ ಯಾವುದೇ ಅಧ್ಯಯನದ ವ್ಯಾಸಂಗ ಕ್ರಮಕ್ಕೆ ಯಾವುದೇ ಉನ್ನತ ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸಬಹುದು;

(ii) ಯಾವುದೇ ಇತರ ಶಿಕ್ಷಣ ಸಂಸ್ಥೆಯಲ್ಲಿನ ಇತರ ಅಧ್ಯಯನದ ವ್ಯಾಸಂಗ ಕ್ರಮಗಳ ಸಂದರ್ಭದಲ್ಲಿ ಸರ್ಕಾರವು ನಿರ್ದಿಷ್ಟಪಡಿಸುವಂತಿರತಕ್ಕದ್ದು;

(ಬಿ) ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಯನ ವ್ಯಾಸಂಗ ಕ್ರಮಕ್ಕೆ ಪ್ರವೇಶ ನೀಡಬೇಕಾದ ವಿದ್ಯಾರ್ಥಿಗಳ ಗರಿಷ್ಠ ಸಂಖ್ಯೆಯು, ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂತೆ ಇರತಕ್ಕದ್ದು.

(2) 3ನೇ ಪ್ರಕರಣದ ನಿಬಂಧನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯಲ್ಲಿ ವಿಧಿಸಲಾದ ಅಥವಾ ವಸೂಲು ಮಾಡಲಾದ ಕ್ಯಾಪಿಟೇಷನ್ ಶುಲ್ಕವನ್ನು ನಿಯಂತ್ರಿಸುವ ಸಲುವಾಗಿ ಸರ್ಕಾರವು ಕಾಲಕಾಲಕ್ಕೆ, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಪ್ರತಿಯೊಂದು ಖಾಸಗಿ ಶಿಕ್ಷಣ ಸಂಸ್ಥೆ ಅಥವಾ ಅಂಥ ಸಂಸ್ಥೆಗಳ ವರ್ಗ ಅಥವಾ ವರ್ಗಗಳಿಗೆ ಸಂಬಂಧಿಸಿದಂತೆ,–

(ಎ) ಸರ್ಕಾರಿ ಸೀಟುಗಳೆಂದು ನಿಗದಿಪಡಿಸಿದಷ್ಟು ಸಂಖ್ಯೆಯ ಸೀಟುಗಳನ್ನು ;

(ಬಿ) ಅಂಥ ಸಂಸ್ಥೆಯ ಆಡಳಿತ ವರ್ಗವು ಭರ್ತಿ ಮಾಡಬಹುದಾದಷ್ಟು ಸಂಖ್ಯೆಯ ಸೀಟುಗಳನ್ನು,–

(i) ಅರ್ಹತೆಯ ಆಧಾರದ ಮೇಲೆ ಕರ್ನಾಟಕ ವಿದ್ಯಾರ್ಥಿಗಳ ವರ್ಗದಿಂದ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟು ವರ್ಷಗಳ ನಂತರ, ಬಡ್ಡಿ ಸಹಿತವಾಗಿ ಅಥವಾ ಬಡ್ಡಿ ರಹಿತವಾಗಿ, ಮರುಪಾವತಿ ಮಾಡಲಾಗುವಂಥ ನಗದು ಠೇವಣಿಗಳನ್ನು ಸಂದಾಯ ಮಾಡಿದ ಮೇಲೆ, ಆದರೆ ಕ್ಯಾಪಿಟೇಷನ್ ಶುಲ್ಕದ ಸಂದಾಯವಿಲ್ಲದೆ ಭರ್ತಿ ಮಾಡಬಹುದು; ಅಥವಾ

(ii) ಅದರ ವಿವೇಚನೆಗೆ ಅನುಸಾರವಾಗಿ

– ಭರ್ತಿ ಮಾಡಬಹುದು:

ಆದರೆ, ಸರ್ಕಾರವು ನಿರ್ದಿಷ್ಟಪಡಿಸಬಹುದಾದಷ್ಟು ಸಂಖ್ಯೆಯ ಸೀಟುಗಳನ್ನು ಆದರೆ (ಎ) ಮತ್ತು (ಬಿ) ಖಂಡಗಳಲ್ಲಿ ಉಲ್ಲೇಖಿಸಿರುವ ಸೀಟುಗಳ ಒಟ್ಟು ಸಂಖ್ಯೆಯು ಶೇ.50 ಕ್ಕಿಂತ ಕಡಿಮೆ ಇರದಂತೆ ಕರ್ನಾಟಕ ವಿದ್ಯಾರ್ಥಿಗಳ ವರ್ಗದಿಂದ ಭರ್ತಿ ಮಾಡತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ ಕರ್ನಾಟಕದ ವಿದ್ಯಾರ್ಥಿಗಳು ಎಂದರೆ, ಸರ್ಕಾರವು ನಡೆಸುತ್ತಿರುವ ಅಥವಾ ಮನ್ನಣೆ ಪಡೆದ ಕರ್ನಾಟಕ ರಾಜ್ಯದಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರವು ನಿರ್ದಿಷ್ಟಪಡಿಸಬಹುದಾದಷ್ಟು ಸಂಖ್ಯೆಯ ವರ್ಷಗಳವರೆಗೆ ಅಧ್ಯಯನ ಮಾಡಿದ ವ್ಯಕ್ತಿಗಳು ;

(3) 2ನೇ ಖಂಡದ (ಬಿ) ಉಪ ಖಂಡದ (i)ನೇ ಬಾಬಿನ ಅನುಸಾರವಾಗಿ ಭರ್ತಿ ಮಾಡಬೇಕಾಗಿರುವ ಶಿಕ್ಷಣ ಸಂಸ್ಥೆಯ ಅಂಥ ಸೀಟುಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಒಂದು ಸಮಿತಿಯನ್ನು ರಚಿಸತಕ್ಕದ್ದು. ಸರ್ಕಾರದ ಮತ್ತು ಅಂಥ ಶಿಕ್ಷಣ ಸಂಸ್ಥೆಯು ಸಂಯೋಜನೆಗೊಂಡಿರುವ ವಿಶ್ವ ವಿದ್ಯಾನಿಲಯದ ತಲಾ ಒಬ್ಬೊಬ್ಬ ನಾಮ ನಿರ್ದೇಶಿತನನ್ನು ಅಂಥ ಸಮಿತಿಯಲ್ಲಿ ಸದಸ್ಯರನ್ನಾಗಿ ಸೇರಿಸಿಕೊಳ್ಳತಕ್ಕದ್ದು.

**5. ಶುಲ್ಕಗಳ ನಿಯಂತ್ರಣ, ಇತ್ಯಾದಿ.–** (1) ಸರ್ಕಾರವು ಅಧಿಸೂಚನೆಯ ಮೂಲಕ, ಯಾವುದೇ ಅಥವಾ ಎಲ್ಲ ವರ್ಗದ ಅಥವಾ ವರ್ಗಗಳ ವಿದ್ಯಾರ್ಥಿಗಳ ಸಂಬಂಧದಲ್ಲಿ ಯಾವುದೇ ಶಿಕ್ಷಣ ಸಂಸ್ಥೆಯು ಅಥವಾ ಅಂಥ ಸಂಸ್ಥೆಗಳ ವರ್ಗವು ಸ್ವೀಕರಿಸಬಹುದಾದ ಅಥವಾ ಸಂಗ್ರಹ ಮಾಡಬಹುದಾದ ಬೋಧನಾ ಶುಲ್ಕ ಅಥವಾ ಯಾವುದೇ ಇತರ ಶುಲ್ಕ ಅಥವಾ ಠೇವಣಿ ಅಥವಾ ಇತರ ಮೊಬಲಗನ್ನು ನಿಯಂತ್ರಿಸಲು ಸಕ್ಷಮವಾಗಿರತಕ್ಕದ್ದು.

(2) ಯಾವುದೇ ಶಿಕ್ಷಣ ಸಂಸ್ಥೆಯು (1)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚಿಸಲಾದ ಮೊಬಲಗಿಗಿಂತ ಅಧಿಕವಾಗಿ ಯಾವುದೇ ಶುಲ್ಕ ಅಥವಾ ಮೊಬಲಗನ್ನು ಸಂಗ್ರಹಿಸತಕ್ಕದ್ದಲ್ಲ ಅಥವಾ ಠೇವಣಿಗಳನ್ನು ಅಂಗೀಕರಿಸತಕ್ಕದ್ದಲ್ಲ ಅಥವಾ 3ನೇ ಪ್ರಕರಣದ ಪರಂತುಕದ ಮೇರೆಗೆ ಅನುಮತಿಸತಕ್ಕದ್ದಲ್ಲ.

(3) ಪ್ರತಿಯೊಂದು ಶಿಕ್ಷಣ ಸಂಸ್ಥೆಯು ತಾನು ಸಂಗ್ರಹಿಸಿದ ಶುಲ್ಕ ಅಥವಾ ಕ್ಯಾಪಿಟೇಷನ್ ಶುಲ್ಕ ಅಥವಾ ಠೇವಣಿಗಳು ಅಥವಾ ಇತರ ಮೊಬಲಗಿಗೆ ಅಧಿಕೃತ ರಸೀದಿಯನ್ನು ನೀಡತಕ್ಕದ್ದು.

(4) ಯಾವುದೇ ಶಿಕ್ಷಣ ಸಂಸ್ಥೆಯು, ಶುಲ್ಕ ಅಥವಾ ಕ್ಯಾಪಿಟೇಷನ್ ಶುಲ್ಕ ಅಥವಾ ಠೇವಣಿಗಳು ಅಥವಾ ಇತರ ಮೊಬಲಗಿನ ರೂಪದಲ್ಲಿ ಸ್ವೀಕರಿಸಿದ ಎಲ್ಲ ಹಣವನ್ನು ಸಂಸ್ಥೆಯ ಖಾತೆಯಲ್ಲಿ ಯಾವುದೇ ಅನುಸೂಚಿತ ಬ್ಯಾಂಕುಗಳಲ್ಲಿ ಠೇವಣಿ ಇಡತಕ್ಕದ್ದು ಮತ್ತು ಅದನ್ನು ಸಂಸ್ಥೆಯ ಸುಧಾರಣೆಗೆ ಮತ್ತು ಶೈಕ್ಷಣಿಕ ಸೌಲಭ್ಯಗಳ ಅಭಿವೃದ್ಧಿಗೆ ಮತ್ತು ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸಂಬಂಧಿತ ಉದ್ದೇಶಗಳಿಗೆ ಮತ್ತು ಅಷ್ಟರ ಮಟ್ಟಿಗೆ ಮತ್ತು ಅಂಥ ರೀತಿಯಲ್ಲಿ ವಿನಿಯೋಗಿಸತಕ್ಕದ್ದು ಮತ್ತು ಖರ್ಚು ಮಾಡತಕ್ಕದ್ದು.

(5) (4)ನೇ ಉಪಪ್ರಕರಣದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ಸರ್ಕಾರವು ಯಾವುವೇ ಶಿಕ್ಷಣ ಸಂಸ್ಥೆಗಳನ್ನು, ಆ ಸಂಸ್ಥೆಯು ಸುಧಾರಣೆ ಮತ್ತು ಅಭಿವೃದ್ಧಿಯ ಸಲುವಾಗಿ ತಾವು ರೂಪಿಸಿರುವ ಕಾರ್ಯಕ್ರಮಗಳನ್ನು ಅಥವಾ ಯೋಜನೆಗಳನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವಂತೆ ಅಗತ್ಯಪಡಿಸಬಹುದು.

**6. ವೆಚ್ಚದ ನಿಯಂತ್ರಣ ಮತ್ತು ಲೆಕ್ಕಪತ್ರಗಳ ನಿರ್ವಹಣೆ, ಇತ್ಯಾದಿ.–** (1) ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಶಿಕ್ಷಣ ಸಂಸ್ಥೆಗಳ ವೆಚ್ಚವನ್ನು ಮತ್ತು ಅವುಗಳ ಲೆಕ್ಕಪತ್ರಗಳ ನಿರ್ವಹಣೆಯನ್ನು ನಿಯಂತ್ರಿಸಬಹುದು.

(2) ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅದು ಅವಶ್ಯವೆಂದು ಭಾವಿಸಬಹುದಾದಂಥ ವರದಿಗಳನ್ನು ಅಥವಾ ವಿವರಪತ್ರಗಳನ್ನು ಸಲ್ಲಿಸುವಂತೆ ಅಗತ್ಯಪಡಿಸಬಹುದು.

**7. ದಂಡನೆಗಳು.–** ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು ಅಥವಾ ಆದೇಶಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಅಪರಾಧ ನಿರ್ಣಯವಾದ ತರುವಾಯ ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದ ಆದರೆ ಏಳು ವರ್ಷಗಳನ್ನು ಮೀರದ ಅವಧಿಯ ಸೆರೆಮನೆವಾಸದಿಂದ

ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು. 3ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ಅಪರಾಧ ನಿರ್ಣಯ ಮಾಡಿರುವಲ್ಲಿ, ಅದರ ಅಡಿಯಲ್ಲಿ ಅಪರಾಧ ನಿರ್ಣೀತವಾದ ಸಂಸ್ಥೆ ಅಥವಾ ವ್ಯಕ್ತಿಯು, ಯಾರಿಂದ ಅಧಿಕ ಮೊಬಲಗನ್ನು ಸಂಗ್ರಹಿಸಲಾಗಿದೆಯೋ ಆ ಪಕ್ಷಕಾರನಿಗೆ ಆ ಹಣವನ್ನು ಮರು ಪಾವತಿ ಮಾಡತಕ್ಕದ್ದು.

8. **ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಯಾವುವೇ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ವಿರುದ್ಧ ಒಂದು ಅಪರಾಧವನ್ನು ಒಂದು ಕಂಪನಿ ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳನ್ನು ನಡೆಸಲು ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ಕಾನೂನು ಕ್ರಮಕ್ಕೆ ಗುರಿಯಾಗತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡಿತರಾಗತಕ್ಕದ್ದು:

ಆದರೆ, ಈ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ರೀತಿಯ ಅಗತ್ಯ ಎಚ್ಚರಿಕೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಅಂಥ ಯಾರೇ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಯಾವುದೇ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವನ್ನು ಕಂಪನಿಯ ಯಾವೊಬ್ಬ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆಯೆಂದು ಅಥವಾ ಅವನ ಯಾವುದೇ ನಿರ್ಲಕ್ಷ್ಯದಿಂದ ನಡೆದಿದೆಯೆಂದು ರುಜುವಾತಾದಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವನ ವಿರುದ್ಧದ ಕಾನೂನು ಕ್ರಮಕ್ಕೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) 'ಕಂಪನಿ'ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಟ್ರಸ್ಟ್‌ನ್ನು, ಫರ್ಮ್‌ನ್ನು, ಸೊಸೈಟಿಯನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ ; ಮತ್ತು

(ಬಿ) (i) ಫರ್ಮಿಗೆ ಸಂಬಂಧಿಸಿದಂತೆ 'ನಿರ್ದೇಶಕ' ಎಂದರೆ ಆ ಫರ್ಮಿನ ಒಬ್ಬ ಪಾಲುದಾರ ;

(ii) ಒಂದು ಸೊಸೈಟಿ, ಒಂದು ಟ್ರಸ್ಟ್ ಅಥವಾ ವ್ಯಕ್ತಿಗಳ ಇತರ ಸಂಘ ಎಂದರೆ, ಸೊಸೈಟಿ, ಟ್ರಸ್ಟ್ ಅಥವಾ ಇತರ ಸಂಸ್ಥೆಗಳ ನಿಯಮಗಳ ಅಡಿಯಲ್ಲಿ ಸಂದರ್ಭಾನುಸಾರ ಸೊಸೈಟಿ, ಟ್ರಸ್ಟ್ ಅಥವಾ ಇತರ ಸಂಸ್ಥೆಯ ವ್ಯವಹಾರಗಳ ಆಡಳಿತವನ್ನು ವಹಿಸಿಕೊಡಲಾದ ವ್ಯಕ್ತಿ.

9. **ಪ್ರವೇಶಿಸುವ ಮತ್ತು ಪರಿಶೀಲಿಸುವ ಅಧಿಕಾರ.–** ಈ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ಅಧಿಕೃತರಾದ ಗೆಜೆಟೆಡ್ ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಅಧಿಕಾರಿಯು, ಈ ಅಧಿನಿಯಮದ ಯಾವುವೇ ಉಪಬಂಧಗಳ ಉಲ್ಲಂಘನೆಯಾಗುತ್ತಿದೆ ಅಥವಾ ಆಗಿದೆಯೆಂದು ನಂಬಲು ಕಾರಣವಿದ್ದರೆ, ಅವನು ಯಾವುದೇ ಶಿಕ್ಷಣ ಸಂಸ್ಥೆಯ ಕೆಲಸದ ಸಾಮಾನ್ಯ ವೇಳೆಯಲ್ಲಿ, ಯಾವುದೇ ಸಮಯದಲ್ಲಿ ಅಂಥ ಸಂಸ್ಥೆಯನ್ನು ಅಥವಾ ಅದರ ಯಾವುದೇ ಆವರಣವನ್ನು ಅಥವಾ ಅಂಥ ಸಂಸ್ಥೆಯ ಆಡಳಿತ ಮಂಡಳಿಗೆ ಸೇರಿದ ಯಾವುದೇ ಆವರಣವನ್ನು ಪ್ರವೇಶಿಸಬಹುದು ಮತ್ತು ಅಂಥ ಸಂಸ್ಥೆಗೆ ಅಥವಾ ಆಡಳಿತ ಮಂಡಳಿಗೆ ಸೇರಿದ ಯಾವುದೇ ದಾಖಲೆ, ಲೆಕ್ಕಪತ್ರಗಳು, ರಿಜಿಸ್ಟರ್ ಅಥವಾ ಇತರ ದಸ್ತಾವೇಜುಗಳನ್ನು ಯಾವುದೇ ಅಂಥ ದಾಖಲೆ, ಲೆಕ್ಕಪತ್ರಗಳು, ರಿಜಿಸ್ಟರು ಅಥವಾ ಇತರ ದಸ್ತಾವೇಜುಗಳು ಅಂಥ ಸಂಸ್ಥೆಗೆ ಸಂಬಂಧಪಡುವಷ್ಟರ ಮಟ್ಟಿಗೆ ಅವುಗಳನ್ನು ಶೋಧಿಸಬಹುದು ಮತ್ತು ಪರಿಶೀಲಿಸಬಹುದು ಮತ್ತು ಯಾವುದೇ ಅಂಥ ಉಲ್ಲಂಘನೆಯಾಗುತ್ತಿದೆಯೇ ಅಥವಾ ಆಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಅಂಥ ಯಾವುದೇ ದಾಖಲೆಯನ್ನು, ಲೆಕ್ಕಪತ್ರಗಳನ್ನು, ರಿಜಿಸ್ಟರನ್ನು, ಅಥವಾ ಇತರ ದಸ್ತಾವೇಜುಗಳನ್ನು ವಶಪಡಿಸಿಕೊಳ್ಳಬಹುದು.

(2) ಈ ಅಧಿನಿಯಮದ ಪ್ರಾರಂಭದಲ್ಲಿ ಅಸ್ತಿತ್ವದಲ್ಲಿರುವ, ಯಾವುದೇ ಶಿಕ್ಷಣ ಸಂಸ್ಥೆಯ ಹಣಕಾಸುಗಳನ್ನು ಅಥವಾ ಸಂಪನ್ಮೂಲಗಳನ್ನು ಅಥವಾ ಇತರ ಆಸ್ತಿಗಳನ್ನು ಸೂಕ್ತವಾಗಿ ಮತ್ತು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಬಗ್ಗೆ ಖಚಿತಪಡಿಸಿಕೊಳ್ಳುವುದಕ್ಕಾಗಿ, ಸರ್ಕಾರವು (1)ನೇ ಉಪಪ್ರಕರಣದ ಉಪಬಂಧಗಳ ನೆರವು ಪಡೆಯಲು ಮತ್ತು ಸಂಸ್ಥೆಯ ಅಂಥ ಹಣಕಾಸುಗಳ, ಸಂಪನ್ಮೂಲಗಳ ಮತ್ತು ಆಸ್ತಿಗಳ ಬಗ್ಗೆ ಖಚಿತಪಡಿಸಿಕೊಳ್ಳಲು ಮತ್ತು ಹಾಗೆ

ಖಚಿತಪಡಿಸಿಕೊಂಡ ತರುವಾಯ ಆಡಳಿತ ಮಂಡಲಿಗೆ ತಾನು ಸೂಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ನೀಡಲು ಸಕ್ಷಮವಾಗಿರತಕ್ಕದ್ದು.

(3) ಶೋಧನೆಗಳು ಮತ್ತು ಜಪ್ತಿಗಳಿಗೆ ಸಂಬಂಧಿಸಿದಂತೆ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಉಪಬಂಧಗಳು (1)ನೇ ಉಪಪ್ರಕರಣದ ಅಡಿಯಲ್ಲಿನ ಶೋಧನೆಗಳಿಗೆ ಮತ್ತು ಜಪ್ತಿಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಅನ್ವಯವಾಗತಕ್ಕದ್ದು.

**10. ಅಲ್ಪ ಸಂಖ್ಯಾತ ಸಂಸ್ಥೆಗಳಿಗೆ ಅಧಿನಿಯಮದ ಅನ್ವಯ.–** ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಅಥವಾ ಆದೇಶಗಳಲ್ಲಿ ಇರುವ ಯಾವುದೂ, ಭಾರತ ಸಂವಿಧಾನದ 30ನೇ ಅನುಚ್ಛೇದದ ಅಡಿಯಲ್ಲಿ ಖಾತರಿಗೊಳಿಸಲಾದ ಹಕ್ಕುಗಳೊಂದಿಗೆ ಅವು ಅಸಂಗತವಾಗಿರುವಷ್ಟರ ಮಟ್ಟಿಗೆ ಯಾವುದೇ ಅಲ್ಪ ಸಂಖ್ಯಾತ ಶಿಕ್ಷಣಸಂಸ್ಥೆಗೆ ಅನ್ವಯವಾಗತಕ್ಕದ್ದಲ್ಲ.

**11. ಅಪರಾಧಗಳ ಸಂಜ್ಞೇಯತೆ.–** ಯಾವುದೇ ನ್ಯಾಯಾಲಯವು ಸರ್ಕಾರದ ಅಥವಾ ಈ ಸಂಬಂಧದಲ್ಲಿ ಸರ್ಕಾರವು ಅಧಿಕೃತಗೊಳಿಸಬಹುದಾದಂಥ ಅಧಿಕಾರಿಯ ಮಂಜೂರಾತಿ ಪಡೆದ ಹೊರತು, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಸಂಜ್ಞೇಯತೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**12. ಇತರ ಕಾನೂನುಗಳನ್ನು ಅಧಿಕ್ರಮಿಸುವ ಅಧಿನಿಯಮ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಸಂಗತವಾದುದು ಏನೇ ಇದ್ದರೂ, ಈ ಅಧಿನಿಯಮದ ಉಪಬಂಧಗಳು ಜಾರಿಯಲ್ಲಿರತಕ್ಕದ್ದು.

**13. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು ಅಥವಾ ಆದೇಶಗಳ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಲು ಅಥವಾ ಪ್ರಕಾರ್ಯಗಳನ್ನು ನಿರ್ವಹಿಸಲು ಅಧಿಕಾರ ಪಡೆದ ಸರ್ಕಾರದ ಅಥವಾ ಯಾರೇ ಅಧಿಕಾರಿಯ, ಪ್ರಾಧಿಕಾರದ ಅಥವಾ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು, ಅಭಿಯೋಜನೆಯನ್ನು ಅಥವಾ ಇತರ ಕಾನೂನು ಕ್ರಮವನ್ನು ಹೂಡತಕ್ಕದ್ದಲ್ಲ.

**14. ನಿಯಮ ರಚನಾಧಿಕಾರ.–** (1) ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಎಲ್ಲ ಅಥವಾ ಯಾವುವೇ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ನಂತರ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲವು ಅಧಿವೇಶನದಲ್ಲಿದ್ದರೆ ಅದರ ಪ್ರತಿಯೊಂದು ಸದನದ ಮುಂದೆ, ಮತ್ತು ಅದು ಅಧಿವೇಶನದಲ್ಲಿಲ್ಲದಿದ್ದರೆ, ನಿಕಟ ತರುವಾಯದ ಒಟ್ಟು ಮೂವತ್ತು ದಿನಗಳ ಅವಧಿಯ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಲಾದ ಅಧಿವೇಶನವು ಅಥವಾ ಅದರ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಎರಡೂ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಆ ನಿಯಮವನ್ನು ರದ್ದುಗೊಳಿಸಬೇಕೆಂದು ಒಪ್ಪಿದರೆ, ಆ ನಿಯಮವು, ಆ ಮಾರ್ಪಾಟನ್ನು ಅಥವಾ ರದ್ಧತಿಯನ್ನು ಅಧಿಸೂಚಿಸಿದಂಥ ದಿನಾಂಕದಿಂದ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಜಾರಿಗೊಳ್ಳತಕ್ಕದ್ದು ಅಥವಾ ರದ್ದಾಗತಕ್ಕದ್ದು; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲವಾಗಿರತಕ್ಕದ್ದಲ್ಲ.

**15. ಸಿಂಧುಗೊಳಿಸುವಿಕೆ.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಇದು ಅಧಿನಿಯಮಿತ ಗೊಳ್ಳುವುದನ್ನು ಮುಂದುವರಿಸುವ ಯಾವುದೇ ವಿಷಯದ ಸಂಬಂಧದಲ್ಲಿ (ಸರ್ಕಾರಿ ಆದೇಶ ಸಂ. ಎಚ್ ಎಫ್ ಡಬ್ಲ್ಯೂ 44 ಎಂ ಎಸ್ ಎಫ್ 83, ದಿನಾಂಕ 20ನೇ ಜೂನ್ 1983, ಸರ್ಕಾರಿ ಆದೇಶ ಸಂ. ಇಡಿ 37 ಟಿಇಸಿ 83, ದಿನಾಂಕ 7ನೇ ಜುಲೈ 1983 ಮತ್ತು ಸರ್ಕಾರಿ ಆದೇಶ ಸಂ. ಇಡಿ 37 ಟಿಇಸಿ 83, ದಿನಾಂಕ 1ನೇ ಅಕ್ಟೋಬರ್ 1983, ಸರ್ಕಾರಿ ಆದೇಶ ಸಂ. ಇಡಿ 23 ಟಿಇಸಿ 84, ದಿನಾಂಕ 21ನೇ ಜೂನ್ 1984, ಸರ್ಕಾರಿ ಆದೇಶ ಸಂ. ಎಚ್ ಎಫ್ ಡಬ್ಲ್ಯೂ 137 ಪಿಟಿಡಿ 84, ದಿನಾಂಕ 25ನೇ ಜುಲೈ 1984, ಸರ್ಕಾರಿ ಆದೇಶ ಸಂ. ಇಡಿ 175 ಟಿಪಿಇ 84, ದಿನಾಂಕ 31ನೇ ಜುಲೈ 1984 ಮತ್ತು ಸರ್ಕಾರಿ ಆದೇಶ ಸಂ. ಎಚ್‌ಎಫ್‌ಡಬ್ಲ್ಯೂ 136 ಎಂಎಸ್‌ಎಫ್ 84 ದಿನಾಂಕ 1ನೇ ಆಗಸ್ಟ್ 1983 ಇವುಗಳೂ ಸೇರಿ),–

(ಎ) ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧ್ಯಾದೇಶ, 1983 (1983ರ ಕರ್ನಾಟಕ ಅಧ್ಯಾದೇಶ ಸಂ. 10) ರ ಅಡಿಯಲ್ಲಿ ಅಥವಾ ಅದರ ಪ್ರಾರಂಭದ ದಿನಾಂಕಕ್ಕೆ ಮುಂಚೆ; ಮತ್ತು

[1][(ಬಿ) ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) (ಸಂ.2) ಅಧ್ಯಾದೇಶ, 1983ರ (1983ರ ಕರ್ನಾಟಕ ಅಧ್ಯಾದೇಶ ಸಂ. 14) ಅಡಿಯಲ್ಲಿ ಅಥವಾ ಸದರಿ ಅಧ್ಯಾದೇಶವನ್ನು ಘೋಷಿಸಿದ ದಿನಾಂಕಕ್ಕೆ ಮುಂಚೆ, ಆದರೆ, 1983ರ ಕರ್ನಾಟಕ ಅಧ್ಯಾದೇಶ ಸಂ.10 ರದ್ದಾದ ತರುವಾಯ; ಮತ್ತು

(ಸಿ) ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧ್ಯಾದೇಶ, 1984ರ (1984ರ ಕರ್ನಾಟಕ ಅಧ್ಯಾದೇಶ ಸಂ. 8) ಅಡಿಯಲ್ಲಿ ಅಥವಾ ಸದರಿ ಅಧ್ಯಾದೇಶವನ್ನು ಘೋಷಿಸಿದ ದಿನಾಂಕಕ್ಕೆ ಮುಂಚೆ ಆದರೆ 1983ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 14 ರದ್ದಾದ ತರುವಾಯ

– ಮಾಡಿದ ಅಥವಾ ಹೊರಡಿಸಿದ ಯಾವುದೇ ನಿಯಮ ಅಥವಾ ಆದೇಶ ಅಥವಾ ಅಧಿಸೂಚನೆಯನ್ನು ಮತ್ತು ಅಂಥ ನಿಯಮ ಅಥವಾ ಆದೇಶ ಅಥವಾ ಅಧಿಸೂಚನೆಯ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯವನ್ನು ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೇರೆಗೆ ಮಾಡಲಾದುದು ಅಥವಾ ಹೊರಡಿಸಲಾದುದು ಆಥವಾ ಸಂದರ್ಭಾನುಸಾರ ಅದರ ಅಡಿಯಲ್ಲಿ ಮಾಡಲಾದ ಅಥವಾ ಹೊರಡಿಸಲಾದ ಯಾವುದೇ ಅಂಥ ನಿಯಮ ಅಥವಾ ಆದೇಶ ಅಥವಾ ಅಧಿಸೂಚನೆಯ ಮೇರೆಗೆ ಮಾಡಿದ್ದಾಗಿದ್ದರೆ ಅಥವಾ ಕೈಗೊಂಡಿದ್ದಾಗಿದ್ದರೆ ಹೇಗೋ ಹಾಗೆ ಸಿಂಧುವಾಗಿದೆ ಎಂದು ಮತ್ತು ಜಾರಿಯಾಗಿದೆ ಎಂದು ಭಾವಿಸತಕ್ಕದ್ದು.][1]

1. (ಬಿ) ಮತ್ತು (ಸಿ) ಖಂಡಗಳನ್ನು 1985ರ ಅಧಿನಿಯಮ 17ರ ಮೂಲಕ 9.8.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**16.** [1]**[ನಿರಸನ ಮತ್ತು ಉಳಿಸುವಿಕೆಗಳು, ಇತ್ಯಾದಿ]**[1].– (1) ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) (ಸಂ.2) ಅಧ್ಯಾದೇಶ, 1983ರ (1983ರ ಕರ್ನಾಟಕ ಅಧ್ಯಾದೇಶ ಸಂ. 14) – ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

[1][(2) ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧ್ಯಾದೇಶ, 1984 (1984ರ ಕರ್ನಾಟಕ ಅಧ್ಯಾದೇಶ ಸಂ. 8) – ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(3) 1983ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 14 ಮತ್ತು 1984ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 8 ಇವುಗಳನ್ನು ನಿರಸನಗೊಳಿಸಿದ್ದರೂ, ಸದರಿ ಅಧ್ಯಾದೇಶಗಳ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯವನ್ನು, ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

(4) 7ನೇ ಮತ್ತು 8ನೇ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಆದರೆ (3)ನೇ ಉಪ ಪ್ರಕರಣಕ್ಕೆ ಒಳಪಟ್ಟು, 1983ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 14 ರದ್ದಾದ ನಂತರ, ಆದರೆ ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿನಿಯಮವನ್ನು ಪ್ರಕಟಿಸಿದ ದಿನಾಂಕಕ್ಕಿಂತ ಮುಂಚೆ ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಮಾಡಿದ ಯಾವುದೇ ಕಾರ್ಯಕ್ಕಾಗಿ ಯಾರೇ ವ್ಯಕ್ತಿ ಅಥವಾ ಒಂದು ಕಂಪನಿಯನ್ನು ಅಪರಾಧಿಯೆಂದು ನಿರ್ಣಯಿಸತಕ್ಕದ್ದಲ್ಲ.][1]

1. 1985ರ ಅಧಿನಿಯಮ 17 ರ ಮೂಲಕ 9.8.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

* * *

The above translation of the Karnataka Educational Institutions (Prohibition of Capitation Fee) Act, 1984 (Karnataka Act 37 of 1984) shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963).

GOVERNOR OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

ಪಿ.ಆರ್. 972

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.